ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1206 (1415)
ಸದಸ್ಯರ ಹೆಸರು	ಶ್ರೀ ಎಸ್.ನಾಗಾರಾಜ್
ಉತ್ತರಿಸುವ ದಿನಾಂಕ:	18-03-2020
ಉತ್ತರಿಸುವವರು	ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

	ಪ್ರಶ್ನೆ	ಉತ್ತರ
ಅ	ಬಿಳಿಗಿರಿ ರಂಗನ ಬೆಟ್ಟ ದೇವಾಲಯ ನಿರ್ಮಾಣದ ಕಾಮಗಾರಿಗಳು ಪ್ರಾರಂಭವಾಗಿದ್ದು ಯಾವಾಗ ಇದುವರೆಗೆ ಪೂರ್ಣವಾಗಿರುವ ಕಾಮಗಾರಿಗಳು ಯಾವುವು; ಇನ್ನು ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳಿಗೆ ಮಂಜೂರಾಗಿದ್ದ ಅನುದಾನ ಎಷ್ಟು: ಎಷ್ಟು ಹಣ ಇದುವರೆಗೆ ಖರ್ಚಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು) ಖಾಸಗಿ ವ್ಯಕ್ತಿಗಳು ಯಾವುದಾದರೂ ಕಾಮಗಾರಿಗಳನ್ನು ಮಾಡಿಸಿಕೊಟ್ಟಿರುವರೇ ಅಥವಾ ಮಾಡಿಸಿಕೊಡಲು ಮುಂದೆ ಬಂದಿರುವರೆ; ಅವರಿಗೆ ಕಾಮಗಾರಿಗಳ ನಿರ್ಮಾಣವನ್ನು ವಹಿಸಲಾಗಿದೆಯೇ;	ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯವು ಧಾರ್ಮಿಕ ದತ್ತಿ ಇಲಾಖೆಯ ಪ್ರವರ್ಗ 'ಎ' ಶ್ರೇಣಿಯ ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಈ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಯನ್ನು 2017ರ ಏಪ್ರಿಲ್‌ನಲ್ಲಿ ರಾಜ್ಯ ಪ್ರಾಚ್ಯವಸ್ತು ಇಲಾಖಾ ವತಿಯಿಂದ ರೂ.240.00 ಲಕ್ಷಗಳ ಅನುದಾನದಲ್ಲಿ ಪ್ರಾರಂಭಿಸಲಾಗಿದ್ದು, ದೇವಾಲಯದ ಜೀರ್ಣೋದ್ಧಾರ ಕಾಮಗಾರಿಯು ಪೂರ್ಣಗೊಂಡು, ರೂ.240.00 ಲಕ್ಷಗಳ ಅನುದಾನವು ಕಾಮಗಾರಿಗೆ ಖರ್ಚಾಗಿರುತ್ತದೆ. ಆದರೆ, ದೇವಾಲಯದ ಸುತ್ತ ನೆಲಹಾಸು ಕಾಮಗಾರಿಯು ಬಾಕಿ ಇದ್ದು, ರೂ.100.00ಲಕ್ಷ ಅನುದಾನವು ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾಗಿದ್ದು, ಕಾಮಗಾರಿಯು ಪ್ರಾರಂಭಿಸಬೇಕಾಗಿರುತ್ತದೆ. ದಾನಿಗಳಿಂದ ಈ ದೇವಾಲಯದ ಪಾಕಶಾಲೆ, ಯಾಗಶಾಲೆ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಪಾಕಶಾಲೆ ಕಾಮಗಾರಿಯು ಪೂರ್ಣವಾಗಿದ್ದು, ಯಾಗಶಾಲೆ ಕಾಮಗಾರಿಯು ಶೇಕಡ 60%ರಷ್ಟು ಪ್ರಗತಿಯಲ್ಲಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.
ಆ	ಕಾಮಗಾರಿಗಳ ವಿಳಂಬದಿಂದ ಜನವರಿ-16 ರಂದು ನಡೆಯಬೇಕಾಗಿದ್ದ ಚಿಕ್ಕ ಜಾತ್ರೆ ರದ್ದಾಗಿದೆಯೇ; ಮೇ 27 ರಿಂದ ಜೂನ್ 1 ರಂದು ಪುನರ್ ಪ್ರತಿಷ್ಠಾಪನೆಗೆ ಸೂಕ್ತ ಕಾಲ ಎಂದು ತೀರ್ಮಾನಿಸಲಾಗಿದೆಯೇ; ಅದರೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೇ; ಇನ್ನೂ ಎಷ್ಟು ಅನುದಾನದ ಅಗತ್ಯ ಇದೆ; (ವಿವರ ಒದಗಿಸುವುದು)	ಈ ದೇವಾಲಯದ ಕಾಮಗಾರಿಗಳ ಹಿನ್ನೆಲೆಯಲ್ಲಿ ದೇವಾಲಯದ ಪ್ರಾಕಾರದ ಸುತ್ತ ಸೂಕ್ತ ಸ್ಥಳಾವಕಾಶ ಇಲ್ಲದೆ ಇರುವುದರಿಂದ ದೇವಾಲಯದ ಪುನರ್ ಪ್ರತಿಷ್ಠಾಪನೆ ಆಗುವವರೆಗೂ ತಾತ್ಕಾಲಿಕವಾಗಿ ಚಿಕ್ಕ ಜಾತ್ರೆ ಉತ್ಸವವನ್ನು ಸ್ಥಗಿತಗೊಳಿಸಲಾಗಿರುತ್ತದೆ. ಮೇ 27 ರಿಂದ ಜೂನ್ 1 ರಂದು ಪುನರ್ ಪ್ರತಿಷ್ಠಾಪನೆಗೆ ಸೂಕ್ತ ಕಾಲ ಎಂದು ದೇವಾಲಯದ ಆಗಮ ಪಂಡಿತರು ವರದಿ ನೀಡಿದ್ದು, ಪರಿಶೀಲನೆಯಲ್ಲಿರುತ್ತದೆ. ಮೇಲಿನ (ಅ) ಭಾಗದಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಏಪ್ರಿಲ್ ಅಂತ್ಯದ ಒಳಗೆ ಪೂರ್ಣಗೊಳಿಸಲಾಗುವುದು ಹಾಗೂ ಈ ದೇವಾಲಯಕ್ಕೆ ಹೆಚ್ಚುವರಿ ಅನುದಾನ ರೂ.1500.00 ಲಕ್ಷಗಳು ಬಿಡುಗಡೆಯಾದರೆ, ಶ್ರೀ ಕ್ಷೇತ್ರದ ಅಭಿವೃದ್ಧಿ ಹಾಗೂ ಬಿಳಿಗಿರಿರಂಗನಬೆಟ್ಟವನ್ನು ಪ್ರವಾಸಿ ತಾಣ ಮತ್ತು ಯಾತ್ರಾಸ್ಥಳವಾಗಿ ಮಾಡಬಹುದಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಇ	ಚಾಮರಾಜನಗರ ಚಾಮರಾಜೇಶ್ವರ ರಥದ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ; ಇದು ಯಾವಾಗ ಪೂರ್ಣಗೊಳ್ಳುತ್ತದೆ; ರಥೋತ್ಸವ ರದ್ದಾಗಿ ಭಕ್ತ ಜನರ ಧಾರ್ಮಿಕ ಭಾವನೆಗಳಿಗೆ ಕುಂದು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೂಡಲೇ ರಥ ನಿರ್ಮಾಣ ಕಾಮಗಾರಿಗಳನ್ನು ಮುಗಿಸಿ, ರಥೋತ್ಸವ ನಡೆಸಲು ಅನುಕೂಲ ಮಾಡಿಕೊಡಲಾಗುವುದೇ?	ಚಾಮರಾಜನಗರದ ಶ್ರೀ ಚಾಮರಾಜೇಶ್ವರಸ್ವಾಮಿ ರಥದ ನಿರ್ಮಾಣ ಕಾಮಗಾರಿಯನ್ನು Expression Of Intrest ಅಡಿಯಲ್ಲಿ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲು ರಥಶಿಲ್ಪಿ ಶ್ರೀ ಬಿ.ಎಸ್. ಬಡಿಗೇರ್ & ಸನ್ಸ್ (ಪ್ರೊ) (ಶಿವಕುಮಾರ್ ಬಿ. ಬಡಿಗೇರ) ರವರಿಗೆ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಚಾಮರಾಜನಗರ ವಿಭಾಗ, ಚಾಮರಾಜನಗರ ರವರ ಕಛೇರಿಯ ಟೆಂಡರ್ ಕರಾರು ಪತ್ರ ಸಂಖ್ಯೆ:407/2018-19, ದಿನಾಂಕ:28.02.2019 ರನ್ವಯ ಕಾರ್ಯಾದೇಶ ನೀಡಲಾಗಿದೆ. ಕರಾರಿನಂತೆ ಕಾಮಗಾರಿಯು ದಿನಾಂಕ: 28.02.2020 ರಂದು ಪೂರ್ಣಗೊಳ್ಳಬೇಕಾಗಿತ್ತು. ಆದರೆ ರಥ ನಿರ್ಮಾಣಕ್ಕೆ ಯೋಗ್ಯ ಮರ ಸಿಗಲಿಲ್ಲವಾದ್ದರಿಂದ ವಿಳಂಬವಾಗಿದೆ. ಈಗ ರಥಕ್ಕೆ ಬೇಕಾಗಿರುವ ಮರವನ್ನು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸರ್ಕಾರಿ ಮರವಟ್ಟು ಸಂಗ್ರಹಾಲಯ ಕಿರುವತ್ತಿ ರವರಲ್ಲಿ ಮರವನ್ನು ದಿನಾಂಕ:31.12.2019 ರಂದು ಖರೀದಿಸಲಾಗಿದೆ. ಮರವನ್ನು ಸಾಮಿಲ್ಲಿನಲ್ಲಿ ಅಳತೆಗನುಗುಣವಾಗಿ ದಿನಾಂಕ:15.02.2020 ರಂದು ಕೊರೆಸಲಾಗಿದ್ದು, ಒಣಗಲು ಇಡಲಾಗಿದೆ. ರಥ ನಿರ್ಮಾಣವನ್ನು ತುರ್ತಾಗಿ ಪೂರ್ಣಗೊಳಿಸಲು ಕ್ರಮಕೈಗೊಂಡು ರಥೋತ್ಸವ ನಡೆಸಲು ಅನುಕೂಲ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

(ಸಂಖ್ಯೆ:ಕಂಇ 60 ಮುಸಪ್ರ 2020)

(ಕೋಟಾ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು.